**536 ಶ್ರೀ ಸುರೇಶ್‌ಬಾಬು ಸಿ.ಬಿ.(ಚಿಕ್ಕನಾಯಕನಹಳ್ಳಿ)** : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಎಲ್ಲಾ ಲಂಬಾಣಿ ತಾಂಡ್ಯ, ಗೊಲ್ಲರಹಟ್ಟಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಪ್ರಸ್ತಾವನೆ ಸರ್ಕಾರಕ್ಕಿದೆಯೇ;

ಆ) ಹಾಗಿದ್ದಲ್ಲಿ, ಈ ಪ್ರಸ್ತಾವನೆ ಬಗ್ಗೆ ಸರ್ಕಾರ ಇದುವರೆವಿಗೆ ಏನು ಕ್ರಮ ಕೈಗೊಂಡಿದೆ;

ಇ) ಲಂಬಾಣಿ ತಾಂಡ್ಯ ಮತ್ತು ಗೊಲ್ಲರಹಟ್ಟಿಗಳನ್ನು ಕಂದಾಯ ಗ್ರಾಮವನ್ನಾಗಿ ಪರಿವರ್ತಿಸುವ ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

**ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು)** :

ಅ) -ಇದೆ–

ಆ) ರಾಜ್ಯದಲ್ಲಿನ ಲಂಬಾಣಿ ತಾಂಡ ಗೊಲ್ಲರಹಟ್ಟಿ: ಹ್ಯಾಮ್ಲೆಟ್ ಇತ್ಯಾದಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಬಗ್ಗೆ ಕೆಲವೊಂದು ಮಾರ್ಗಸೂಚಿಗಳನ್ನು ಅನುಸರಿಸಲಾಗುತ್ತಿದ್ದು ಅದರನ್ವಯ 500 ಜನಸಂಖ್ಯೆ ಹೊಂದಿರುವ ಅಥವಾ 100 ಕುಟುಂಬಗಳಿರುವ ಲಂಬಾಣಿ ತಾಂಡ:ಹಟ್ಟಿ: ಹ್ಯಾಮ್ಲೆಟ್‌ಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸ–ಲಾಗುತ್ತಿದೆ. ಈ ಅಳತೆ ಗೋಲಿಗಿಂತ ಜನಸಂಖ್ಯೆ:ಕುಟುಂಬಗಳು ಕಡಿಮೆ ಇರುತ್ತವೆಯೋ ಅಂತಹ ಲಂಬಾಣಿ ತಾಂಡ:ಹಟ್ಟಿ:ಹ್ಯಾಮ್ಲೆಟ್‌ಗಳನ್ನು ಹತ್ತಿರದ ಮುಖ್ಯ ಹಳ್ಳಿಗೆ ಸೇರಿಸುವಂತೆ ದಿನಾಂಕ: 13–4–94ರಂದು ಜರುಗಿದ ಸಚಿವ ಸಂಪುಟದ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಅದರನ್ವಯ ಅರ್ಹವಿರುವ ಲಂಬಾಣಿ ತಾಂಡ:ಹಟ್ಟಿ:ಹ್ಯಾಮ್ಲೆಟ್, ಮಜರೆ ಗ್ರಾಮ ಇತ್ಯಾದಿಗಳನ್ನು ಕಂದಾಯ ಗ್ರಾಮ ಮಾಡುವ ಬಗ್ಗೆ ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಪಡೆದು ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ (1964ರ ಕರ್ನಾಟಕ ಕಾಯ್ದೆ 12) ಕಲಂ 5ರನ್ವಯ ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಇ) –ಬಂದಿದೆ–